ಹುದ್ದೆಗಳು ಖಾಲಿ ಇವೆ. ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದಿದ್ದರೂ, ಕಾಂಪೌಂಡರ್ ಇಲ್ಲದಿದ್ದರು ದಾದಿ ಇಲ್ಲದಿದ್ದರೂ, ಸ್ವೀಪರ್ಸ್ ಇಲ್ಲದಿದ್ದರೂ ಶಾಸಕರೇ ಜವಾಬ್ದಾರರಾಗುತ್ತಾರೆ. ಇದೆಲ್ಲ ಪತ್ರಿಕೆಯಲ್ಲಿ ಬರುತ್ತದೆ. ಪತ್ರಿಕೆಯಲ್ಲಿ ಏನು ಬಂದರೂ ಸಹ ಅದಕ್ಕೆ ಸ್ಪಷ್ಟೀಕರಣ ನೀಡುವ ಜವಾಬ್ದಾರಿ ತಮ್ಮ ಇಲಾಖೆಗೆ ಇಲ್ಲ. ಶಾಸಕರು ಕೆಲಸ ಮಾಡುತ್ತಿಲ್ಲ, ನಿದ್ರೆ ಮಾಡುತ್ತಿದ್ದಾರೆ, ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ ಎನ್ನತಕ್ಕ ಹೊಣೆ ತಾವು ಮಾಡುವ ಕೆಲಸದಿಂದ ನಮ್ಮಮೇಲೆ ಬರುತ್ತಿದೆ. ಒಂದು ಆಸ್ಪತ್ರೆಯನ್ನು ತೆರೆದು ಮತ್ತೊಂದು ಆಸ್ಪತ್ರೆಯನ್ನು ಮುಚ್ಚುವುದು ಎಷ್ಟು ಸಮಂಜಸವೆಂದು ಕೇಳುತ್ತೇನೆ.

ಅಧ್ಯಕ್ಷರು : ಹುದ್ದೆಗಳು ಖಾಲಿ ಇರುವುದು, ಸಚಿವರು ಸರ್ಕಾರದಿಂದ ಮಂಜೂರಾತಿ ಕೇಳಿರುವುದು ಅದಕ್ಕೆ ಅನುಮತಿ ಕೊಟ್ಟಿರುವುದು ಬೇರೆ ಬೇರೆ ವಿಚಾರವಾಯಿತು. ಅವರು ಪ್ರಶ್ನೆ ಕೇಳಿರತಕ್ಕದ್ದು it is very simple ಇಷ್ಟು ಹುದ್ದೆ ಇದೆ, out of sanctioned posts, they have already been sanctioned by Finance Department, but because of the unscientific transfer order that the Government passes ಇದು ಆಗುತ್ತದೆ. ಒಂದು ಕಡೆ ಭರ್ತಿ ಇರುತ್ತದೆ ಇನ್ನೊಂದು ಕಡೆ ಖಾಲಿ ಇರುತ್ತದೆ. ಇದು ಸ್ಥಳೀಯ ಶಾಸಕರ ಮೇಲೆ ಪರಿಣಾಮ ಬೀರುತ್ತದೆಂದು ಅವರ ವಾದವಾಗಿದೆ.

ಡಾ|| ಹೆಚ್. ಸಿ. ಮಹದೇವಪ್ಪ : ಮನ್ಯ ಅಧ್ಯಕ್ಷರೆ, ಈಗಾಗಲೇ ವೈದ್ಯರ ವರ್ಗಾವಣೆಗೆ ಸಂಬಂಧಿಸಿದಂತೆ ನೀತಿಯೊಂದನ್ನು ಈ ಮನೆಯ ಗಮನಕ್ಕೆ ತಂದಿದ್ದೇನೆ. ಆರೋಗ್ಯ ಇಲಾಖೆ ಜಿಲ್ಲಾಪರಿಷತ್ತಿನ ಆಡಳಿತದ ವ್ಯಾಪ್ತಿಗೆ ನೇರವಾಗಿ ಬರುವುದರಿಂದ ಅಲ್ಲಿ ಪ್ರಭಾವಿಗಳು ಸ್ಥಳೀಯ ಸಂಸ್ಥೆಯನ್ನು ಹಿಡಿದುಕೊಂಡು ಪ್ರಾಬ್ಲಮ್ಯಾಟಿಕ್‌ನಿಂದ ನಾನ್‌ಪ್ರಾಬ್ಲಮ್ಯಾಟಿಕ್‌ಗೆ ವರ್ಗ ಮಾಡತಕ್ಕ ಪ್ರಯತ್ನ ನಡೆದಾಗ ಆಯಾಯ ಜಿಲ್ಲಾಪರಿಷತ್‌ಗಳಿಗೆ ಇಂಥ ಕ್ರಮ ಕೈಗೊಳ್ಳಲು ಹೋಗಬೇಡಿ ಎಂದು ಸೂಚನೆ ಕೊಡುತ್ತೇನೆ. ಜೊತೆಗೆ ಆ ಭಾಗದಲ್ಲಿ ಟೆಕ್ನಿಶಿಯನ್ ಆಗಲಿ, ವೈದ್ಯರಾಗಲಿ ಲಭ್ಯವಾಗುವುದಿಲ್ಲ. ಸೂಕ್ಷ್ಮಮತಿಗಳು, ವಿದ್ಯಾವಂತತೆಯನ್ನು ಹೊಂದಿರತಕ್ಕ ಜಿಲ್ಲೆಗಳಲ್ಲಿ ಸಹಜವಾಗಿ ಪ್ರತಿಯೊಂದು ವಿಚಾರದ ಬಗ್ಗೆ ಪ್ರಶ್ನೆ ಮಾಡತಕ್ಕ ಸಂದರ್ಭದಲ್ಲಿ ಅಲ್ಲಿರತಕ್ಕ ಪ್ರತಿನಿಧಿಗಳು ಸಹ ಸರ್ಕಾರವನ್ನು ಒತ್ತಾಯ ಮಾಡತಕ್ಕದ್ದು, ಸಹಜವಾದ ಪ್ರಕ್ರಿಯೆಯಾಗಿದೆ. ಎಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾಡಲು ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇನೆ. ಪರ್ಯಾಯ ವ್ಯವಸ್ಥೆಯಾಗದೆ ವರ್ಗಾವಣೆ ಮಾಡಿದಾಗ ಕಾನೂನನ್ನು ಮೀರಿ ನಾನು ಅವರಿಗೆ ಸೂಚನೆ ಕೊಡುತ್ತೇನೆ.

ಸಾರ್ವಜನಿಕ ಗ್ರಂಥಾಲಯಗಳು

544 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಾಂಥಾಲಯಕ್ಕೆ ಸರ್ಕಾರವು ನಿಗಧಿ ಮಾಡಿದ ಹಣವೆಷ್ಟು?

ಆ) ಕಳೆದ 2 ವರ್ಷಗಳಲ್ಲಿ ಎಷ್ಟೆಷ್ಟು ಪುಸ್ತಕಗಳನ್ನು ಖರೀದಿಸಿದೆ?

ಇ) ಇದರಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವ ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಈ) ಅನಗತ್ಯ ಪುಸ್ತಕಗಳನ್ನು ಖರೀದಿಸಿ, ಹಣ ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) 1997-98ನೇ ಸಾಲಿಗೆ ಯೋಜನೆ, ಯೋಜನೇತರದಲ್ಲಿ ರೂ. 1049.48 ಲಕ್ಷಗಳು ಹಾಗೂ ಗ್ರಂಥಾಲಯ ಕರದಿಂದ 450.00 ಲಕ್ಷ ರೂ.ಗಳು.

ಆ) 1995-96ನೇ ಸಾಲಿನಲ್ಲಿ 4,20,402 ಗ್ರಂಥಗಳು 1996-97ನೇ ಸಾಲಿನಲ್ಲಿ 5,72,488 ಗ್ರಂಥಗಳು.

ಇ) ಸಾರ್ವಜನಿಕರಿಗೆ ಆಯಾ ವರ್ಷದಲ್ಲಿ ದೊರೆಯುವ ಕನ್ನಡ ಸಾಹಿತ್ಯದ ಪುಸ್ತಕಗಳನ್ನು, ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು, ಮಕ್ಕಳಿಗೆ ಸಾಹಿತ್ಯದ ಹಾಗೂ ಸ್ಪರ್ಧಾತ್ಮಕ ಗ್ರಂಥಗಳನ್ನು ಒದಗಿಸಲಾಗುತ್ತದೆ.

ಈ) ಇಲ್ಲ. ಉದ್ಭವಿಸುವುದಿಲ್ಲ.

ಶ್ರೀ ಕೆ. ಜಯರಾಮ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳಲ್ಲಿ ಎಷ್ಟು ಪುಸ್ತಕಗಳನ್ನು ಖರೀದಿ ಮಾಡಿದ್ದೀರಿ ಎಂಬುದಕ್ಕೆ 1995-96ರಲ್ಲಿ 4,20,402 ಗ್ರಂಥಗಳು, 1997-97ರಲ್ಲಿ 5,72,488 ಗ್ರಂಥಗಳನ್ನು ಖರೀದಿ ಮಾಡಿರುವುದಾಗಿ ಉತ್ತರ ಕೊಟ್ಟಿದ್ದಾರೆ. ತಾವು ಈ ಗ್ರಂಥಗಳನ್ನು ಖರೀದಿ ಮಾಡುವಾಗ ಯಾವ ಮಾನದಂಡವನ್ನು ಉಪಯೋಗ ಮಾಡುವಿರಿ? ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗ್ರಂಥಾಲಯವನ್ನು ತೆರೆದಿದ್ದೀರಾ? ತೆರೆಯದಿದ್ದರೆ ಯಾವ ಮಾನದಂಡದ ಪ್ರಕಾರ ತೆರೆಯಲು ಅವಕಾಶ ಮಾಡಿಕೊಡುತ್ತೀರಾ? ನನಗೆ ತಿಳಿದಿರುವ ಹಾಗೆ ಕೆಲವು ಜಿಲ್ಲೆಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಂಥಾಲಯದ ಸೌಲಭ್ಯವಿಲ್ಲ. ತಾವು ತೆಗೆದುಕೊಂಡಿರುವ ಗ್ರಂಥಗಳನ್ನು ಎಲ್ಲರೂ ಉಪಯೋಗ ಮಾಡುತ್ತಿದ್ದಾರಾ? ಅಥವಾ ಕಾಟಾಚಾರಕ್ಕೆ ನಿಮಗೆ ಬಂದಂತೆ ಪುಸ್ತಕಗಳನ್ನು ಖರೀದಿ ಮಾಡಿದ್ದೀರಾ?

ಅಧ್ಯಕ್ಷರು : ಇಷ್ಟು ಪುಸ್ತಕಗಳನ್ನು ಕೊಂಡುಕೊಂಡಿದ್ದೀರಿ ಅದನ್ನು ಕೊಂಡುಕೊಳ್ಳಬೇಕಾದರೆ ತಾವೇನಾದರೂ ನೀತಿಯನ್ನು ರೂಪಾಸಿದ್ದೀರಾ? ಹೊಸ ಗ್ರಂಥಾಲಯವನ್ನು ಪ್ರಾರಂಭ ಮಾಡಲು ವ್ಯವಸ್ಥಿತವಾದ ನೀತಿಯನ್ನು ರೂಪಿಸಿಕೊಂಡಿದ್ದೀರಾ? ಪುಸ್ತಕಗಳನ್ನೇನು ಕೊಂಡು ಕೊಂಡಿದ್ದೀರಿ ಅದನ್ನು ಎಷ್ಟು ಜನರು ಬಳಸಿರಬಹುದು? ಇಷ್ಟಕ್ಕೆ ಮಾಹಿತಿ ಕೊಡಿ.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಸಾರ್ವಜನಿಕ ಓದುಗರಿಗೆ ಉತ್ತಮ ಗ್ರಂಥಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಮಟ್ಟದ ಸಾಹಿತಿ, ಶಿಕ್ಷಣ

ತಜ್ಞರನ್ನೊಳಗೊಂಡ ಒಂದು ಉನ್ನತ ಗ್ರಂಥ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಆಯಾ ವರ್ಷದಲ್ಲಿ ಪ್ರಕಟಗೊಂಡ ಕನ್ನಡ ಹಾಗೂ ಇತರೆ ಭಾಷೆಗಳ ಗ್ರಂಥಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ತಯಾರಿಸುತ್ತದೆ. ಈ ಪಟ್ಟಿಯ ಪ್ರಕಾರ ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯಗಳು ಗ್ರಂಥಗಳನ್ನು ಆಯಾ ಗ್ರಂಥಾಲಯಗಳ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಖರೀದಿಸುತ್ತವೆ. ಈ ವ್ಯವಸ್ಥೆಯಿಂದ ಅನಗತ್ಯ ಪುಸ್ತಕಗಳನ್ನು ಖರೀದಿಸುವುದು ಮತ್ತು ಹಣ ದುರುಪಯೋಗದ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಇಲಾಖೆಗೆ 1997-98ನೇ ಸಾಲಿನ ಯೋಜನೆಯಡಿಯಲ್ಲಿ 100.00 ಲಕ್ಷ ರೂಪಾಯಿಗಳನ್ನು ಯೋಜನೇತರ ಅಡಿಯಲ್ಲಿ 949.43 ಲಕ್ಷ ರೂಪಾಯಿಗಳನ್ನು ಮತ್ತು ಗ್ರಂಥಾಲಯ ಕರದಿಂದ ಬರುವ 450.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹಣದಿಂದ ಸಾರ್ವಜನಿಕರಿಗೆ ಆಯಾ ವರ್ಷಗಳಲ್ಲಿ ಪ್ರಕಟಗೊಳ್ಳುವ ಕನ್ನಡ ಸಾಹಿತ್ಯದ ಪುಸ್ತಕಗಳನ್ನು, ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಹಾಗೂ ಮಕ್ಕಳಿಗೆ ಸಾಹಿತ್ಯದ ಹಾಗೂ ಸ್ಪರ್ಧಾತ್ಮಕ ಗ್ರಂಥಗಳನ್ನು ಒದಗಿಸಲಾಗುತ್ತದೆ. ಕಳೆದ 2 ವರ್ಷಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಒಟ್ಟು 9,92,890 ಗ್ರಂಥಗಳನ್ನು ಖರೀದಿಸಿದೆ. ಖರೀದಿಸಿದ ವೆಚ್ಚ 466.65 ಲಕ್ಷ ರೂಪಾಯಿಗಳಾಗಿರುತ್ತದೆ.

ಶ್ರೀ ಕೆ. ಜಯರಾಮ್‌ಶೆಟ್ಟಿ : ತಾವು ಖರೀದಿ ಮಾಡಿರುವ ಗ್ರಂಥದ ಗುಣಮಟ್ಟ ಯಾವ ರೀತಿಯದ್ದು? ಗ್ರಾಮಾಂತರ ಪ್ರದೇಶದಲ್ಲಿ ಗ್ರಂಥಾಲಯವನ್ನು ರಚನೆ ಮಾಡಿದರೆ ಪ್ರಯೋಜನವಿಲ್ಲ. ವಾಚನಾಲಯಗಳನ್ನು ತೆರೆದರೆ ಅನುಕೂಲವಾಗುತ್ತದೆ. ಸಾಮಾನ್ಯ ಜನರಿಗೆ ಗ್ರಂಥಾಲಯಕ್ಕಿಂತ ವಾಚನಾಲಯಗಳಿಂದ ಹೆಚ್ಚು ಅನುಕೂಲವಾಗುತ್ತದೆ. ಕೇವಲ ದಪ್ಪ ಪುಸ್ತಕಗಳಿಂದ, ಕಬ್ಬಿಣದ ಕಡಲೆಗಳಂತಿರುವ ಪುಸ್ತಕಗಳಿಂದ ಅವರಿಗೆ ಏನು ಪ್ರಯೋಜನವಾದೀತು? ಆದ್ದರಿಂದ, ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲಕರವಾದ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸುತ್ತಿದ್ದೀರಾ? ತಾವು ಪಠ್ಯ ಪುಸ್ತಕಕ್ಕೆ ಎಂದು ಹೇಳಿದ್ದೀರಿ. ನನಗೆ ಎರಡನ್ನು ಒಟ್ಟಿಗೆ ಸೇರಿಸಿ ಮಾಹಿತಿ ಬೇಕಾಗಿಲ್ಲ. ವಾಚನಾಲಯದ ಗ್ರಂಥಗಳಿಗೆ ಎಷ್ಟು ಪಠ್ಯಪುಸ್ತಕಕ್ಕೆ ಎಷ್ಟು ಎಂಬ ಬಗ್ಗೆ ಮಾಹಿತಿ ಬೇಕು. ಅದರ ಬಗ್ಗೆ ಅಂಕಿಅಂಶವಿದೆಯೇ?

ಶ್ರೀ ಆರ್. ಕೃಷ್ಣಪ್ಪ : ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆದು ಒದಗಿಸುತ್ತೇನೆ.

ಅಧ್ಯಕ್ಷರು : ತಾವು ಕೇಳಿದ ವಿವರಗಳು ಸಚಿವರ ಹತ್ತಿರ ಸಧ್ಯದಲ್ಲಿ ಲಭ್ಯವಿಲ್ಲದಿರುವುದರಿಂದ ಎಲ್ಲ ವಿವರಗಳನ್ನು ಪಡೆದುಕೊಂಡು ಒದಗಿಸುತ್ತಾರೆ.

ಶ್ರೀ ಕೆ. ಜಯರಾಮ್‌ಶೆಟ್ಟಿ : ಅಧ್ಯಕ್ಷರೆ, ಇವರು ಅನಗತ್ಯ ಪುಸ್ತಕಗಳನ್ನು ಖರೀದಿಸುತ್ತಿದ್ದಾರೆ. ಜನರಿಗೆ ಏನು ಬೇಕೋ ಅದರ ಬಗ್ಗೆ ವಿವೇಚನೆ ಇಲ್ಲ. ಸಾಮಾನ್ಯ ಜನರಿಗೆ ತಿಳುವಳಿಕೆ ಕೊಡತಕ್ಕ ವಿಚಾರವಿಲ್ಲ. ಇವರ ಓದಿನ ಮಟ್ಟಕ್ಕೆ ಸರಿಯಾಗಿ ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಇದರಿಂದ ಜನರಿಗೆ ಪ್ರಯೋಜನವಾಗುತ್ತಿಲ್ಲ.

ಅಧ್ಯಕ್ಷರು : ಕೇವಲ ಗ್ರಂಥಾಲಯಕ್ಕೆ ಮಾತ್ರವಲ್ಲ, ಖರೀದಿ ಮಾಡತಕ್ಕ ಅವಕಾಶಗಳು ಸರ್ಕಾರದ ವಿವಿಧ ಅಂಗಗಳು ಎಲ್ಲೆಲ್ಲಿ ಇರುತ್ತವೋ ಅಲ್ಲಿ ಒಂದು ರೀತಿ ಅಭ್ಯಾಸ ಮೂಡಿಬಂದಿದೆ.

ಅದು ಸರ್ಕಾರದ ಹಣ ನೋಡಿ. ಅವರ ಸ್ವಂತ ಹಣವಲ್ಲವಲ್ಲ. ಅದು ವ್ಯಾಪಕವಾಗಿ ಹಬ್ಬಿರತಕ್ಕ ವ್ಯಾಧಿಯಾಗಿದೆ. ಅದಕ್ಕೆ ನಾವೆಲ್ಲರೂ ಕುಳಿತು ಒಂದು ಪರಿಹಾರ ಕಂಡುಹಿಡಿಯೋಣ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಇಂಟರ್‌ನೆಟ್ ವ್ಯವಸ್ಥೆ ಮಾಡಿದರೆ ಹೆಚ್ಚು ಉಪಯೋಗವಾಗಬಹುದು. ಸಂಚಾರಿ ಗ್ರಂಥಾಲಯಗಳೇನಿವೆ ಅದು ಗ್ರಾಮಾಂತರ ಪ್ರದೇಶಗಳಿಗೂ ಹೋಗುವಂತೆ ಹೆಚ್ಚು ಸಂಚಾರಿ ಗ್ರಂಥಾಲಯಗಳನ್ನು ಮಾಡಬೇಕು. ಮಳೆಗಾಲದಲ್ಲಿ ಅನೇಕ ಗ್ರಂಥಾಲಯದ ಕಟ್ಟಡಗಳು ಸೋರುತ್ತಿವೆ. ಅವನ್ನು ತಕ್ಷಣ ದುರಸ್ತಿಗೊಳಿಸಲು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇವೆಲ್ಲವೂ ಯೋಗ್ಯವಾದ ಸಲಹೆಗಳು ಸಚಿವರು ದಯಮಾಡಿ ಪರಿಶೀಲನೆ ಮಾಡಬೇಕು.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಪ್ರತಿಭೆಯುಳ್ಳ ಪ್ರತಿಭಾನ್ವಿತರ ಪುಸ್ತಕಗಳನ್ನು ಖರೀದಿ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಪುಸ್ತಕ ಖರೀದಿಸಲು ಸಮಿತಿ ರಚನೆ ಮಾಡಿದ್ದಾರೆ. ಯಾರೂ ತಿಳಿಯದಿರುವ ಕೆಳಮಟ್ಟದ ಪುಸ್ತಕವನ್ನು ಖರೀದಿಸಿ ಮಕ್ಕಳ ಜ್ಞಾನಕ್ಕೆ ಅಂಧಕಾರವನ್ನು ಉಂಟುಮಾಡತಕ್ಕ ಪರಿಸ್ಥಿತಿ ಬಂದಿದೆ. ಪರಿಣತಿ ಹೊಂದಿರತಕ್ಕಂಥವರು ಪಕ್ವವಾಗಿರುವ ವಿಷಯವುಳ್ಳ ಪುಸ್ತಕಗಳನ್ನು ಕೊಂಡುಕೊಳ್ಳಲು ಸರ್ಕಾರ ಮುಂದಾಗಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ತಮ್ಮ ಕಳಕಳಿಯನ್ನು ಗುರುತಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಕಿರಿಯ ಕಾಲೇಜುಗಳಿಗೆ ಕಟ್ಟಡಗಳು

545 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಸ್ವಂತ ಕಟ್ಟಡವಿಲ್ಲದೆ ಇರುವ ಜೂನಿಯರ್ ಕಾಲೇಜುಗಳೆಷ್ಟು?

ಆ) ಕುಣಿಗಲ್ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂತಹ ಕಾಲೇಜುಗಳೆಷ್ಟು?

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಶಿಕ್ಷಣ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ 43 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿದ್ದು 42 ಕಾಲೇಜುಗಳು ಪ್ರೌಢಶಾಲಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಂದು ಕಾಲೇಜಿಗೆ ಸ್ವಂತ ಕಟ್ಟಡವಿದೆ ಇದೇ ಜಿಲ್ಲೆಯಲ್ಲಿ 3 ಸ್ವತಂತ್ರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. 2 ಕಾಲೇಜುಗಳಿಗೆ ಸ್ವಂತ ಕಟ್ಟಡವಿದೆ. ಇನ್ನೊಂದು ಕಾಲೇಜಿಗೆ ಕಟ್ಟಡ ನಿರ್ಮಾಣ ನಡೆಯುತ್ತಿದೆ.